## 3 ದಿನಗಳ ಅಹೋಬಿಲಂ ನವನಾರಸಿಂಹ ಪ್ರವಾಸ



ಪ್ರವಾಸ ಸ್ಥಳಗಳು: ಜ್ವಾಲಾನರಸಿಂಹ, ಪಾವನನರಸಿಂಹ, ವರಹಾನರಸಿಂಹ, ಕಾರಂಜಿನರಸಿಂಹ, ಮಾಲೋಲನರಸಿಂಹ, ಯೋಗನರಸಿಂಹ, ಭಾರ್ಗವನರಸಿಂಹ, ಛತ್ರವಟನರಸಿಂಹ, ಉಗ್ರನರಸಿಂಹ ಹಾಗೂ ಪ್ರಹ್ಲಾದವರದ ಶ್ರೀ ಲಕ್ಷ್ಮೀನರಸಿಂಹ

ಹೊರಡುವ ತಿಂಗಳು : ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್

**ಮೊ : 9900080792 / 9900080794**

## 6 ದಿನಗಳ ಶ್ರೀಲಂಕಾ ಪ್ರವಾಸ

### ರಾಮಾಯಣ ಕಾಲದ ಸ್ಥಳ ವೀಕ್ಷಣೆ



ಕೊಲೊಂಬೊ, ನೆಗೆಂಬೊ, ಕ್ಯಾಂಡಿ, ಡಾಂಬುಲಾ, ಸೀತಾ ಅಶೋಕವನ, ಹನುಮಾನ್ ದೇವಸ್ಥಾನ ಹಾಗೂ ಶ್ರೀಲಂಕಾ ಸಾಂಸ್ಕೃತಿಕ ಕಾರ್ಯಕ್ರಮಗಳು

ಹೊರಡುವ ತಿಂಗಳು : ಸೆಪ್ಟೆಂಬರ್, ಅಕ್ಟೋಬರ್

**ಮೊ : 9900080798 / 9900080799**

## ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ಪ್ರವಾಸ





ಸಿಡ್ನಿ, ಗೋಲ್ಡ್ ಕೋಸ್ಟ್, ಕೈರ್ನ್ಸ್ (ಆಸ್ಟ್ರೇಲಿಯಾ)
ಆಕ್ಲೆಂಡ್, ರೊಟೂರಾ, ಕ್ವೀನ್ಸ್‌ಟೌನ್, ಕ್ರೈಸ್ಟ್‌ಚರ್ಚ್ (ನ್ಯೂಜಿಲ್ಯಾಂಡ್)

ಹೊರಡುವ ತಿಂಗಳು : ಅಕ್ಟೋಬರ್

**ಮೊ : 9900080790 / 9900080797**

## 9 ದಿನಗಳ ಕಾಂಬೋಡಿಯಾ, ಥೈಲ್ಯಾಂಡ್ ಮತ್ತು ಶ್ರೀಲಂಕಾ ಪ್ರವಾಸ

### (ಥೈಲ್ಯಾಂಡ್-ಬ್ಯಾಂಕಾಕ್, ಪಟ್ಟಾಯಾ, ಕಾಂಬೋಡಿಯಾ-ಅಂಕೊರ್ ವಾಟ್)



ಪಟ್ಟಾಯಾ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಮತ್ತು ಬ್ಯಾಂಕಾಕ್ ನಗರ ವೀಕ್ಷಣೆ ಹಾಗೂ ಇತರೆ.

ಹೊರಡುವ ತಿಂಗಳು : ಸೆಪ್ಟೆಂಬರ್, ಅಕ್ಟೋಬರ್

**ಮೊ : 9900080799 / 9880079588**

**Orchid Travel & Tours**

# 98, 1st Floor, D.V.G. Road, Basavanagudi, Bangalore - 560 004.

www.orchidtravels.net

For more details contact

Tel: 080-26670646, 26621983
26670647, 26617178

ಸಂಪಾದಕೀಯ

# 'ನಿಮ್ಮ ಮುಟ್ಟಿದವರೆಲ್ಲ ನಿಮ್ಮಂತಪ್ಪರಯ್ಯಾ'



## ಅಂಗ –ಅಂಗ

**ನಾ**ವು ನೋಡುವ ಜಗತ್ತು ಸೃಷ್ಟಿಯಾದದ್ದು ಹೇಗೆ? ಇದರ ಬಗ್ಗೆ ಅನೇಕ ತಾತ್ತ್ವಿಕ ಅಭಿಪ್ರಾಯಗಳಿವೆ. ವೀರಶೈವ ಸಿದ್ಧಾಂತದಲ್ಲಿ (ಶಕ್ತಿವಿಶಿಷ್ಟಾದ್ವೈತ ದರ್ಶನ) ಸೃಷ್ಟಿಯ ಕ್ರಮ ವನ್ನು ಅನನ್ಯವಾಗಿ ವಿವರಿಸಲಾಗಿದೆ. ಪರವಸ್ತುವನ್ನು ಇಲ್ಲಿ 'ಸ್ಥಲ' ಎಂದು ಕರೆಯುತ್ತಾರೆ. ಚೇತನ–ಅಚೇತನ ವಸ್ತುಗಳಿಗೆ ಆಧಾರ ಭೂತವಾದುದೇ ಈ ಸ್ಥಲ. ಈ ಸ್ಥಲವೇ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣವಾದುದು. ಇದೇ ಸರ್ವ ಜಗತ್ತಿಗೂ ಆಶ್ರಯವಸ್ತು. ಇದಕ್ಕೆ 'ಶಿವ' ಎಂದು ಹೆಸರು. ಶಿವತತ್ತ್ವವೇ ಸ್ಥಲತತ್ತ್ವ.

ವೀರಶೈವ ದರ್ಶನದ ಪ್ರಕಾರ ಶಿವನು ತನ್ನ ಶಕ್ತಿಯ ಸಹಾಯದಿಂದ ಈ ಜಗತ್ತಿನ ಸೃಷ್ಟಿಯನ್ನು ಮಾಡುತ್ತಾನೆ. ಶಕ್ತಿಯ ಚಲನೆಯಿಂದ ಶಿವನು ಎರಡು ಪ್ರಕಾರವಾಗಿ ಕಾಣಿಸಿಕೊಳ್ಳುತ್ತಾನೆ: **೧. ಅಂಗಸ್ಥಲ, ೨. ಲಿಂಗಸ್ಥಲ.** ಈ ಪರಿಣಾಮಕ್ಕೆ ಶಕ್ತಿಯೇ ಕಾರಣ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಶಿವನೇ ಲಿಂಗ ಮತ್ತು ಅಂಗಗಳಾಗಿ ಮಾರ್ಪಟ್ಟಿದ್ದಾನೆ. ಸೃಷ್ಟಿಯಲ್ಲಿ ಎಲ್ಲವೂ ಶಿವಸ್ವರೂಪವೇ. ಇದನ್ನು ಬಸವಣ್ಣನವರು ಹೀಗೆ ವಿವರಿಸುತ್ತಾರೆ:

**ಎತ್ತೆತ್ತ ನೋಡಿದೊಡತ್ತತ್ತ ನೀನೇ ದೇವಾ**
**ಸಕಲ ವಿಸ್ತಾರದ ರೂಹು ನೀನೇ ದೇವಾ**
**ವಿಶ್ವತೋಚಕ್ಷು ನೀನೇ ದೇವಾ,**
**ವಿಶ್ವತೋಮುಖ ನೀನೇ ದೇವಾ**
**ವಿಶ್ವತೋಬಾಹು ನೀನೇ ದೇವಾ, ವಿಶ್ವತೋಪಾದ ನೀನೇ ದೇವಾ**
**ಕೂಡಲಸಂಗಮದೇವಾ**

ಶಿವನು ಹಾಲಿನಲ್ಲಿ ಇರುವ ತುಪ್ಪದ ಹಾಗೆ, ಮರದಲ್ಲಿರುವ ಅಗ್ನಿಯ ಹಾಗೆ ಸೃಷ್ಟಿಯಲ್ಲೆಲ್ಲ ಅಡಗಿದ್ದಾನೆ ಎಂದು ಇನ್ನೊಬ್ಬ ವಚನಕಾರ ಹೇಳುತ್ತಾನೆ.

## ಅಂಗಾಂಗ ಸಾಮರಸ್ಯ

ಲಿಂಗ–ಅಂಗಗಳು ಸ್ಫಟಿಕ ಹಾಗೂ ಅದರ ಪ್ರಭೆಯಂತೆ ಇರುತ್ತವೆ; ಜ್ಯೋತಿ ಮತ್ತು ಕರ್ಪೂರದಂತೆ ಇರುತ್ತವೆ. ಇದನ್ನು ಸಾಗರದ ಅಲೆಗಳಿಗೆ ಕೂಡ ಹೋಲಿಸಬಹುದು. ಇಲ್ಲಿ ಶಿವನೆಂಬ ಪರವಸ್ತುವೇ ಅನಂತಸಾಗರ. ಅದರ ಮೇಲೆ ಏಳುವ ಎರಡು ಅಲೆಗಳೇ ಲಿಂಗ ಮತ್ತು ಅಂಗ. ಲಿಂಗವು ತನ್ನ ಸಹಜಶಕ್ತಿಯನ್ನು ಉಳಿಸಿಕೊಂಡಿರುತ್ತದೆ; ಶಿವಸ್ವರೂಪಿಯಾಗಿಯೇ ಇದ್ದುಕೊಂಡು 'ಪರಮಾತ್ಮ' ಎಂದು ಕರೆಸಿಕೊಳ್ಳುತ್ತದೆ. ಲಿಂಗಸ್ಥಲವನ್ನು ಆಶ್ರಯಿಸಿಕೊಂಡಿರುವ ಶಕ್ತಿಯೇ ಈ ಜಗತ್ತನ್ನು ಸೃಷ್ಟಿಸುತ್ತದೆ.

ಅಂಗವು ತನ್ನ ನಿಜಸ್ವರೂಪವನ್ನು ಕಳೆದುಕೊಂಡಿರುತ್ತದೆ. ಮಲತ್ರಯಗಳಿಂದ ಬಂಧಿತವಾಗಿ ಜೀವರುಗಳ ರೂಪದಲ್ಲಿ ಇರುತ್ತದೆ. ಮಲತ್ರಯಗಳೆಂದರೆ **ಆಣವಮಲ, ಮಾಯಾಮಲ** ಮತ್ತು **ಕಾರ್ಮಿಕಮಲ.** ಶಿವರೂಪಿಯಾದ ಜೀವಿಯು ತಾನು ಅಣು, ಸೂಕ್ಷ್ಮ ಎಂದು ಭಾವಿಸುವುದು ಆಣವಮಲ. ಜೀವನಿಗೆ ಸ್ಥೂಲಶರೀರವನ್ನೂ ವಿಷಯಗಳನ್ನೂ ಒದಗಿಸುವುದು ಮಾಯಾಮಲ. ಗುರುಮುಖೇನ ಅಧ್ಯಾತ್ಮಶಾಸ್ತ್ರವನ್ನು ಅರಿಯ ಬೇಕೆಂಬ ಇಷ್ಟವಿದ್ದರೂ, ಮತ್ತೆ ಮತ್ತೆ ವಿಷಯಸುಖಗಳಲ್ಲಿ ತೊಡಗಿಸುವುದು ಕಾರ್ಮಿಕಮಲ. ಹೀಗೆ ಬದ್ಧವಾದ 'ಅಂಗ'ವು ಸಾಧನೆಯ ಮಾರ್ಗದಲ್ಲಿ ಪರಿಪಕ್ವಗೊಂಡು ತನ್ನ ನಿಜರೂಪವಾದ ಪೂರ್ಣತ್ವವನ್ನು ಪಡೆಯಬೇಕು; ನೀರಿನ ಹನಿಯು ಕೊನೆಗೆ ಸಮುದ್ರವನ್ನು ಸೇರುವಂತೆ ಅಂಗವು ಲಿಂಗದಲ್ಲಿ ಲೀನವಾಗಬೇಕು. ಇದೇ ಲಿಂಗಾಂಗಸಾಮರಸ್ಯ (ಇದನ್ನೇ ಮೋಕ್ಷವೆಂದೂ, ಮುಕ್ತಿಯೆಂದೂ ಇತರತ್ರ ಕರೆಯುವು ದುಂಟು). ಈ ಸಾಮರಸ್ಯ ಆಗುವುದು ಹೇಗೆ ಎನ್ನುವುದನ್ನು ಅನುಭಾವದ ಭಾಷೆಯಲ್ಲಿ, ವಚನಕಾರರು ವರ್ಣಿಸುತ್ತಾರೆ:

**ಚಿನ್ನದಿಂದಾದ ಹಲವು ಬಂಗಾರವಳಿದು ಕರಗಿದರೆ**
**ಮುನ್ನಿನ ಚಿನ್ನವೇ ಆದಂತೆ;**
**ಉದಕದಿಂದಾದ ವಾರಿಕಲ್ಲು ಕರಗಿ ಮುನ್ನಿನ ಉದಕವೇ ಆದಂತೆ**
**ಚಿನ್ಮಯವಸ್ತುವಿನಿಂದ ಉದಯವಾದ ಚಿತ್‌ಸ್ವರೂಪ ಶರಣನು**
**ಆ ಚಿನ್ಮಯವಸ್ತುವನೇ ಬೆರಸಿ, ಪರಮಶಿವಯೋಗಿಯಾದನಯ್ಯಾ**
**ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ**

ಚಿನ್ನ ಬೇರೆಯಲ್ಲ; ಆಭರಣಗಳು ಬೇರೆಯಲ್ಲ. ನೀರು ಬೇರೆಯಲ್ಲ, ಆಲಿಕಲ್ಲು ಬೇರೆಯಲ್ಲ. ಆಭರಣಗಳನ್ನು ಕರಗಿಸಿ ದರೆ ಮತ್ತೆ ಚಿನ್ನವೇ ಆಗುತ್ತದೆ. ಆಲಿಕಲ್ಲು ಕರಗಿದಾಗ ಅದು ಮತ್ತೆ ನೀರೇ ಆಗುತ್ತದೆ. ಅಂಗವು ಲಿಂಗದ ಭಾವವನ್ನು ತಳೆಯುವುದೂ ಹೀಗೆಯೇ.

**(ಈ ಲೇಖನವನ್ನು ಸಿದ್ಧಪಡಿಸುವಲ್ಲಿ ಮೈಸೂರಿನ ಶ್ರೀ ಆರ್. ಎಸ್. ಪೂರ್ಣಾನಂದ ಅವರ ತುಂಬು ಸಹಕಾರಕ್ಕೆ ಹಾರ್ದಿಕ ಕೃತಜ್ಞತೆಗಳು –ಸಂ.)**

ಲಿಂಗದ ಗುಣ **'ಶಕ್ತಿ.'** ಇದರ ಲಕ್ಷಣ 'ಪ್ರವೃತ್ತಿ.' ಈ ಪ್ರವೃತ್ತಿಯಿಂದಲೇ ಸೃಷ್ಟಿ ಉಂಟಾಗುತ್ತದೆ. ಅಂಗದ ಗುಣ **'ಭಕ್ತಿ.'** ಭಕ್ತಿಯು **'ನಿವೃತ್ತಿ'**ಯ ಗುಣವುಳ್ಳದ್ದು. ಸಂಸಾರದಿಂದ ವಿಮುಖಗೊಂಡು, ಜೀವವು ಲಿಂಗಮುಖಿಯಾಗುವುದಕ್ಕೆ ಅದು ಪ್ರೇರಣೆಯನ್ನು ನೀಡುತ್ತದೆ. ಭಕ್ತಿ ಅಥವಾ ನಿವೃತ್ತಿಮಾರ್ಗದಿಂದಲೇ ಅಂಗವು ಲಿಂಗದೊಡನೆ ಸಾಮರಸ್ಯವನ್ನು ಪಡೆಯಲು ಸಾಧ್ಯ.

### ಅಂಗಸ್ಥಾನಗಳು

ಈ ಐಕ್ಯಸ್ಥಿತಿಯನ್ನು ಪಡೆಯುವ ಸಾಧನಾಮಾರ್ಗವನ್ನೇ ಷಟ್ಸ್ಥಲಮಾರ್ಗವೆಂದು ಕರೆಯಲಾಗಿದೆ. ಇಲ್ಲಿ ಸಾಧನೆಯ ಆರು ಹಂತಗಳನ್ನು ಗುರುತಿಸಬಹುದು. ಇದನ್ನು ಅಲ್ಲಮಪ್ರಭುಗಳ ಈ ವಚನ ಸುಂದರವಾಗಿ ನಿರೂಪಿಸುತ್ತದೆ:

**ವಿಶ್ವಾಸದಿಂದ ಭಕ್ತನಾಗಿ,**
**ಆ ವಿಶ್ವಾಸದೊಳಗಣ ನಿಷ್ಠೆಯಿಂ ಮಹೇಶ್ವರನಾಗಿ**
**ಆ ನಿಷ್ಠೆಯೊಳಗಣ ಸಾವಧಾನದಿಂದ ಪ್ರಸಾದಿಯಾಗಿ**
**ಆ ಸಾವಧಾನದೊಳಗಣ ಸ್ವಾನುಭಾವದಿಂ ಪ್ರಾಣಲಿಂಗಿಯಾಗಿ**
**ಆ ಸ್ವಾನುಭಾವದೊಳಗಣ ಅರಿವಿಂ ಶರಣನಾಗಿ**
**ಆ ಅರಿವು ನಿಜದಲ್ಲಿ ಸಮರಸಭಾವವನ್ನೈದ**
**ನಿರ್ಭಾವ ಪದದೊಳು**
**ನಿಂದ ಭೇದವೇ ಐಕ್ಯಸ್ಥಲ ಕಾಣಾ ಗುಹೇಶ್ವರಾ**

ಭಕ್ತಿಯು ಪ್ರತಿಯೊಂದು ಹಂತದಲ್ಲಿಯೂ ಜೀವಿಯನ್ನು ಮುಂದಿನ ಹಂತಕ್ಕೆ ಏರುವಂತೆ ಪ್ರೇರೇಪಿಸುತ್ತದೆ. ಹೀಗಾಗಿ ಅದನ್ನು ಆಯಾ ಹಂತಗಳ ಅಧಿಷ್ಠಾನವೆಂದು ಕರೆಯಲಾಗಿದೆ.

೧. ಭಕ್ತನ ಪ್ರಧಾನ ಗುಣವೇ ಶ್ರದ್ಧೆ, ವಿಶ್ವಾಸ. ಹಾಗಾಗಿ ಈ ಗುಣಗಳೇ **ಭಕ್ತಸ್ಥಲ**ದ ಲಕ್ಷಣಗಳು. ಇದರ ಅಧಿಷ್ಠಾನ **ಶ್ರದ್ಧಾಭಕ್ತಿ.** ೨. ಈ ಆರಂಭಿಕ ಸಾಧನೆಯನ್ನು ನಿಷ್ಠೆಯಿಂದ ಮುಂದುವರೆಸುವ ಹಂತವೇ **ಮಹೇಶ್ವರಸ್ಥಲ.** ಇದರ ಅಧಿಷ್ಠಾನ **ನೈಷ್ಠಿಕಭಕ್ತಿ.** ೩. ಹೀಗೆ ಮುಂದುವರೆದ ಸಾಧನೆಯಿಂದ ಮನಸ್ಸು ವಿಕಾಸವಾಗಿ ಹೃದಯ ಶ್ರೀಮಂತವಾಗುವುದೇ **ಪ್ರಸಾದಿಸ್ಥಲ.** ಇಲ್ಲಿ ಸಾಧಕನಾದವನು **'ದೊರೆತುದೆಲ್ಲವೂ ಶಿವನ ಪ್ರಸಾದವೇ'** ಎಂಬ ಸಮರ್ಪಣಾ ಭಾವನೆಯನ್ನು ಹೊಂದುತ್ತಾನೆ; ಎಲ್ಲ ಕಾರ್ಯಗಳನ್ನೂ ಯಾವ ಫಲಾಪೇಕ್ಷೆಯೂ ಇಲ್ಲದೆ ಮಾಡುತ್ತಾನೆ. ಇದಕ್ಕೆ ಅಧಿಷ್ಠಾನ **ಅವಧಾನಭಕ್ತಿ.** ೪. ಮುಂದಿನ ಹಂತದಲ್ಲಿ ಸಾಧಕ ಹೆಚ್ಚುಹೆಚ್ಚಾಗಿ ಅಂತರ್ಮುಖಿಯಾಗುತ್ತಾನೆ. ಸೃಷ್ಟಿಕರ್ತನ ಎಲ್ಲ ಶಕ್ತಿಯೂ ತನ್ನಲ್ಲೇ ನಿಹಿತವಾಗಿರುವುದನ್ನು ಪರಿಭಾವಿಸುತ್ತಾನೆ. ಇದೇ **ಪ್ರಾಣಲಿಂಗಿಸ್ಥಲ.** ಇದಕ್ಕೆ ಅಧಿಷ್ಠಾನ **ಆನಂದಭಕ್ತಿ.** ೫. ಹೀಗೆ ಸಾಧನೆಯಲ್ಲಿ ಮುಂದುವರೆದ ಸಾಧಕ ಅದ್ವೈತದ ಅನುಭಾವವನ್ನು ಪಡೆದುಕೊಳ್ಳುತ್ತಾನೆ. ಲೀಲಾಸ್ವರೂಪಿಯಾದ ಶಿವನ ಚಿದಂಶವೇ ತಾನು ಎಂಬ ಸಹಜಸ್ಥಿತಿಯನ್ನು ಹೊಂದುತ್ತಾನೆ. ಇದೇ **ಶರಣಸ್ಥಲ.** ಇದಕ್ಕೆ ಅಧಿಷ್ಠಾನ **ಸಮರಸಭಕ್ತಿ.** ೬. ಲಿಂಗಸ್ವರೂಪವೇ ತಾನು ಎಂದು ಅನುಭವಕ್ಕೆ ತಂದುಕೊಂಡ ಸಾಧಕನು ಲಿಂಗದಲ್ಲಿ ಬೆರೆತು ತಾನೂ ಲಿಂಗಸ್ವರೂಪಿಯೇ ಆಗಿಬಿಡುವುದು **ಐಕ್ಯಸ್ಥಲ.** ಇದೇ ಲಿಂಗಾಂಗಸಾಮರಸ್ಯದ ತುರೀಯ ಸ್ಥಿತಿ. ಶರಣರ ಸಾಧನೆಯೆಲ್ಲವೂ ಈ ಐಕ್ಯಸ್ಥಿತಿಗೆ ಏರುವುದಕ್ಕೇ.

### ಅಂಗಸ್ಥಾನಗಳು

ಈ ಸಾಧನಾಮಾರ್ಗವನ್ನು ಲಿಂಗಸ್ಥಾನಗಳ ಮೂಲಕವೂ ಸಂಕೇತಿಸಬಹುದು. ಇಂಥ ಆರು ಲಿಂಗಸ್ಥಲಗಳನ್ನು ವೀರಶೈವ ಸಿದ್ಧಾಂತವು ಪ್ರತಿಪಾದಿಸುತ್ತದೆ: **೧. ಆಚಾರಲಿಂಗ, ೨. ಗುರುಲಿಂಗ, ೩. ಶಿವಲಿಂಗ, ೪. ಜಂಗಮಲಿಂಗ, ೫. ಪ್ರಸಾದ ಲಿಂಗ** ಮತ್ತು **೬. ಮಹಾಲಿಂಗ.** ಇವು ಹಿಂದೆ ಹೇಳಿದ ಸಾಧನೆಯ ಷಟ್ಸ್ಥಲ ಮಾರ್ಗಗಳಿಗೆ ಅನುಕ್ರಮವಾಗಿ ಆರಾಧನಾವಸ್ತುಗಳಾಗುತ್ತವೆ. ಅಂಗಸ್ಥಾನದಲ್ಲಿ ಏರುತ್ತ ಹೋದಂತೆಲ್ಲ, ಸಾಧಕನ ಲಿಂಗಾನುಭೂತಿಯ ಅನುಭವದ ಮಟ್ಟವು ಉನ್ನತವಾಗುತ್ತ ಹೋಗುತ್ತದೆ ಎಂಬುನ್ನು ಈ ಲಿಂಗ ಸ್ಥಾನಗಳು ಸಂಕೇತಿಸುತ್ತವೆ. ಇವುಗಳಿಗೆ ಕ್ರಮವಾಗಿ **ಕ್ರಿಯಾ, ಜ್ಞಾನ, ಇಚ್ಛಾ, ಆದಿ, ಪರಾ** ಮತ್ತು **ಚಿತ್** ಎಂಬ ಆರು ಶಕ್ತಿಗಳ ಅಧಿಷ್ಠಾನವಿದೆ ಎಂದು ಹೇಳುತ್ತಾರೆ.

ವೀರಶೈವ ಸಂಪ್ರದಾಯದಲ್ಲಿ ಗುರುವಿಗೆ ತುಂಬ ಉನ್ನತವಾದ ಸ್ಥಾನವಿದೆ. **'ಗುರು ಲಿಂಗ ಜಂಗಮ'** ಎಂದು ಹೇಳುವ ಕ್ರಮದಲ್ಲಿಯೇ ಸದ್ಗುರುವು ಶಿಷ್ಯನಿಗೆ ಮೂರು ಹಂತದ ದೀಕ್ಷೆಗಳನ್ನು ನೀಡುತ್ತಾನೆ. ಗುರುವನ್ನು ಲಿಂಗ ಜಂಗಮಗಳಿಗಿಂತಲೂ ಉತ್ತಮಸ್ಥಾನದಲ್ಲಿ ಪರಿಭಾವಿಸಿರುವುದನ್ನು ಇಲ್ಲಿ ಗಮನಿಸಬಹುದು. ಸ್ಥೂಲಶರೀರದಲ್ಲಿ ಧರಿಸಲೆಂದು, ಬಾಹ್ಯಪೂಜೆಗೆಂದು ಕೊಟ್ಟದ್ದು **ಇಷ್ಟಲಿಂಗ.** ಮಂತ್ರದೀಕ್ಷೆಯ ಮೂಲಕ ಕೊಟ್ಟದ್ದು **ಪ್ರಾಣಲಿಂಗ.** ಅದು ಪ್ರಾಣಗಳನ್ನು ಒಳಗೊಂಡ ಸೂಕ್ಷ್ಮಶರೀರಕ್ಕೆ ಸಂಬಂಧಿಸಿದ್ದು. ಆತ್ಮನೊಡನೆ ಕೂಡಿಕೊಂಡದ್ದು **ಭಾವಲಿಂಗ.** ಅದನ್ನು ಗುರುವು ಜ್ಞಾನದೀಕ್ಷೆಯ ಮೂಲಕ ನೀಡುತ್ತಾನೆ. ಇಷ್ಟಲಿಂಗವು ಆನಂದರೂಪದ್ದಾಗಿರುತ್ತದೆ; ಪ್ರಾಣಲಿಂಗವು ಚಿದ್ರೂಪದ್ದು; ಭಾವಲಿಂಗವು ಸದ್ರೂಪವಾದುದು.

ಅಂಗವು ಲಿಂಗವನ್ನು ಆರಾಧಿಸುವ ಸ್ತರಗಳನ್ನು ಹೀಗೆ ಗುರುತಿಸಲಾಗಿದೆ: ೧. ಸ್ಥೂಲಶರೀರದಲ್ಲಿ ಬಾಹ್ಯವಿಷಯಗಳ ಆಸಕ್ತಿಯನ್ನು ತೊರೆದು ಇಷ್ಟಲಿಂಗವನ್ನು ಉಪಾಸನೆ ಮಾಡುವುದು **'ತ್ಯಾಗಾಂಗ'.** ಇಲ್ಲಿ ಕಾಣುವುದು ಸಂಸಾರಭ್ರಾಂತಿಯ ತ್ಯಾಗ. ೨. ವಿಷಯಾಸಕ್ತಿಯ ತ್ಯಾಗದ ನಂತರ, ಎಲ್ಲವನ್ನೂ ಶಿವಪ್ರಸಾದವೆಂಬ ಭಾವದಿಂದ ಅನುಭವಿಸುವುದು ಅಥವಾ ಉಪಭೋಗಿಸುವುದು **'ಭೋಗಾಂಗ'**ವೆನಿಸಿಕೊಳ್ಳುತ್ತದೆ. ೩. ಅಂತರಂಗದ ವಾಸನೆಗಳು ಅಥವಾ ಸಂಸ್ಕಾರಗಳೆಲ್ಲ ನಿರಸನಗೊಂಡ ಬಳಿಕ ಸಾಧಕನು ಎಲ್ಲೆಲ್ಲೂ ಶಿವನನ್ನೇ ಕಾಣುತ್ತಾನೆ; ಆತನ ಸಾನ್ನಿಧ್ಯವನ್ನೇ ಅನುಭವಿಸುತ್ತಾನೆ. ಇದೇ **'ಯೋಗಾಂಗ.'** ಇಲ್ಲಿ ಉಂಟಾಗುವುದು ಈ ಶಿವಯೋಗದ ಆತ್ಯಂತಿಕ ಪರಿಣಾಮವಾದ ಪರಮಾನಂದವೇ.

### ಸತಿಪತಿ ಭಾವ

ಲಿಂಗಾಂಗ ಸಾಮರಸ್ಯದ ಈ ಭಾವನೆಯು ಸಾಮಾನ್ಯರಿಗೆ ಅರ್ಥವಾಗುವುದು ಕಷ್ಟ. ಅದಕ್ಕಾಗಿಯೇ ವಚನಕಾರರು ಈ ಭಾವವನ್ನು ಹಲವಾರು ಹೋಲಿಕೆಗಳ ಅಥವಾ ರೂಪಕಗಳ